ಮೈಸೂರು ದೇವರಾಜ ಮಾರುಕಟ್ಟೆ ಮಳಿಗೆಗಳ ಪುನರ್ ನಿರ್ಮಾಣ

೨೧೮ ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಅಗ್ನಿದುರಂತಕ್ಕೆ ಒಳಗಾಗಿದ್ದ ದೇವರಾಜ ಮಾರುಕಟ್ಟೆಯ ಮಳಿಗೆಗಳ ಪುನರ್ ನಿರ್ಮಾಣ ಕಾರ್ಯ ಯಾವ ಹಂತದಲ್ಲಿ ಇದೆ.

ಆ) ಇದನ್ನು ಎಷ್ಟು ದಿನದಲ್ಲಿ ಪೂರ್ತಿಗೊಳಿಸಲಾಗುವುದು.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ದೇವರಾಜ ಮಾರುಕಟ್ಟೆಯ ಪುನರ್ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದೆ. ಎಲ್ಲಾ ೬೬ ಮಳಿಗೆಗಳ ಕಟ್ಟಡಗಳ ನಿರ್ಮಾಣ ಕಾರ್ಯವು ವಿದ್ಯುಚ್ಛಕ್ತಿ, ಅಳವಡಿಸುವುದನ್ನು ಬಿಟ್ಟು ಪೂರ್ಣವಾಗಿರುತ್ತದೆ. ವಿದ್ಯುಚ್ಛಕ್ತಿ, ಅಳವಡಿಕೆ ಮತ್ತು ನೀರು ಸರಬರಾಜು ಯೋಜನೆಯು ಕಾಮಗಾರಿಗಳಂ ಪ್ರಗತಿಯಲ್ಲಿರುತ್ತವೆ.

ಆ) ಡಿಸೆಂಬರ್ ೯೦ರ ಕೊನೆಯಲ್ಲಿ ಮುಕ್ತಾಯಗೊಳಿಸುವ ಸಾಧ್ಯತೆ ಇದೆ.

ತೊಣಚಿಕೊಪ್ಪಲ್ ಹಾಗೂ ವಿವೇಕಾನಂದ ಬಡಾವಣೆಗೆ ಪೋಲೀಸ್ ಠಾಣೆ ಮಂಜೂರು

೨೨೦ ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರದ ತೊಣಚಿಕೊಪ್ಪಲು ಹಾಗೂ ವಿವೇಕಾನಂದ ಬಡಾವಣೆಗೆ ಹೊಸ ಪೋಲೀಸ್ ಠಾಣೆ ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಆ) ಹಾಗಿದ್ದರೆ, ಇದನ್ನು ಎಂದಿನಿಂದ ಅನುಷ್ಠಾನಕ್ಕೆ ತರಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರೆವಿನ್ಯೂ ನಿವೇಶನಗಳ ಸಕ್ರಮ

೨೨೧ ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವ ಕಾರ್ಯ ಮುಗಿಸಲಾಗಿದೆಯೇ?

ಆ) ಹಾಗಿದ್ದರೆ, ಈ ಬಾಬಿನಿಂದ ಸರ್ಕಾರಕ್ಕೆ ಈವರೆಗೆ ವಸೂಲಾಗಿರುವ ಹಣವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು).—

ಅ) ಇನ್ನೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೆ. ಪ್ರಶ್ನೋತ್ತರಗಳ ವಿಚಾರದಲ್ಲಿ ತಮ್ಮ ಗಮನಕ್ಕೆ ತರಬೇಕಾಗಿರುವ ತಕ್ಕಂಥ ವಿಚಾರವೇನೆಂದರೆ, ನಾವು ಕೆಲವೊಂದು ಪ್ರಶ್ನೆಗಳನ್ನು ಕೇಳಿದರೆ ಆದು ಒಂದು ಸೆಷನ್ ಅಲ್ಲ, ಎರಡು ಮೂರು ಸೆಷನ್ ಆದರೂ ನಮಗೆ ಉತ್ತರ ಬರುವುದಿಲ್ಲ. ಇದು ಉದ್ದೇಶ ಪೂರ್ವಕವಾಗಿ ಸರ್ಕಾರ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಹಿಂದೇಟು ಹಾಕುತ್ತಿದೆ ಎಂದು ನನ್ನ ಭಾವನೆ ಕಳೆದ ಸೆಷನ್‌ನಲ್ಲಿ ನಾನು ಕೆಲವು ಪ್ರಮುಖವಾಂಥ ಪ್ರಶ್ನೆಗಳನ್ನು ಕೇಳಿದ್ದೆ. ಅವು ಯಾವುದಕ್ಕೂ ಉತ್ತರ ಇಲ್ಲ. ಇವೊತ್ತು ಕೂಡ ನನ್ನದೊಂದು ಪ್ರಶ್ನೆ ಇದೆ. ಇವೊತ್ತು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಇಲ್ಲ. ಅಂದರೆ ಸರ್ಕಾರ, ಮಂತ್ರಿಮಂಡಲದಲ್ಲಿರತಕ್ಕವರು ಕೆಲವು ಅಧಿಕಾರಿಗಳಿಗೆ ಶೀಲ್ಡ್ ಮಾಡಲಿಕ್ಕೆ ಈ ತರಹ ಮಾಡುತ್ತಿದ್ದಾರೆ.